# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 06.01.2022 ರಂದು ಬೆಳಿಗ್ಗೆ 11.30 ಘಂಟೆಗೆ Ward ಸಮಿತಿ ಸಭೆಯನ್ನು 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ)ರಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು/ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಸ.ಕಾ.ಅ.) |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 |
| 3 | ಶ್ರೀ ಉಮೇಶ್.ಎಸ್ | ಸದಸ್ಯರು |
| 4 | ಶ್ರೀ ಕೇಶವ ರೆಡ್ಡಿ | ಸದಸ್ಯರು |
| 5 | ಶ್ರೀ ಟಿ.ಎ.ಮೌಲಾ ಸಾಬ್ | ಸಾರ್ವಜನಿಕರು |
| 6 | ಶ್ರೀ ಎನ್.ಜೆ. ಮ್ಯಾಥ್ಯೂ | ಸಾರ್ವಜನಿಕರು |
| 7 | ಮೀರಾ | ಸಾರ್ವಜನಿಕರು |
| 8 | ಡಾ॥ ಯೋಗೇಶ್ | ಪ್ರಾ.ಆ.ಕೇಂ (ವೈದ್ಯಾಧಿಕಾರಿ) |
| 9 | ಶ್ರೀ ನಾಗರಾಜ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ (ಎಸ್-2) |
| 10 | ಶ್ರೀ ಶಿವಶಂಕರ | ಪಿ.ಎಸ್.ಐ ಟ್ರಾಫೀಕ್ ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ |
| 11 | ಶ್ರೀ ಕೆ ಮುದಪ್ಪ | ಎ.ಎಸ್.ಐ ಬಂಡೇಪಾಳ್ಯ ಪೋಲಿಸ್ ಠಾಣೆ |
| 12 | ಶ್ರೀ ರಾಮಚಂದ್ರಯ್ಯ | ಸಹಾಯಕ ಕಂದಾಯ ಅಧಿಕಾರಿ (ಹೆಚ್.ಎಸ್.ಆರ್ ಉಪವಿಭಾಗ) |
| 13 | ಶ್ರೀ ಸಾಯಿಬಣ್ಣ ಎಸ್.ಎನ್. | ಸಹಾಯಕ ಅಭಿಯಂತರರು. ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 14 | ಶ್ರೀ ಡಿ ವಿಜಯಕುಮಾರ್ | ಕಿರಿಯ ಅಭಿಯಂತರರು (ಬೆಸ್ಕಾಂ) |
| 15 | ಶ್ರೀ ಎಸ್.ಸುಧೀರ್ | ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ |
| 16 | ಶ್ರೀ ಹೆಚ್.ಆರ್. ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ.) |
| 17 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 18 | ಶ್ರೀ ಹೊನ್ನುರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ಸಂ. 190) |
| 19 | ಶ್ರೀ ಹೆಚ್. ನರಸಪ್ಪ | ತೋಟಗಾರಿಕೆ ಸಹಾಯಕರು |
| 20 | ಶ್ರೀ ಸುನೀಲ್ | ಬೀದಿ ದೀಪ ನಿರ್ವಾಹಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

(ಪು.ತಿ.ನೋ)

Scanned with

- **<u>ಆರೋಗ್ಯ ಇಲಾಖೆ</u>**

1. ವಾರ್ಡ್ ವ್ಯಾಪ್ತಿಯಲ್ಲಿ ಇದುವರೆಗೂ 450 ಕೋವಿಡ್-19 ಪ್ರಕರಣವು ವರದಿಯಾಗಿರುತ್ತವೆ. ಒಟ್ಟು 2 ಓಮಿಕ್ರಾನ್ ಪ್ರಕರಣವು ವರದಿಯಾಗಿ ಚೇತರಿಸಿಕೊಂಡು Home Isolation ನಲ್ಲಿರುವುದಾಗಿ ಡಾ|| ಯೋಗೇಶ್ ರವರು ಸಭೆಗೆ ತಿಳಿಸಿದ್ದರು.
2. ರಾಜ್ಯದಾದ್ಯಂತ ದಿನಾಂಕ: 03.01.2022 ರಿಂದ 15-18 ವರ್ಷ ವಯಸ್ಸಿನ ಮಕ್ಕಳಿಗೆ ಲಸಿಕೆ ಅಭಿಯಾನವನ್ನು ಸರ್ಕಾರ ಪ್ರಾರಂಭಿಸಿದ್ದು. ಅದರಂತೆ ಈ ವಾರ್ಡ್‌ನಲ್ಲಿ ಮಕ್ಕಳಿಗೆ ಶಾಲೆ/ಕಾಲೇಜು ಮತ್ತು ಲಸಿಕೆ ಕೇಂದ್ರಗಳಲ್ಲಿ ಲಸಿಕೆ ಪಡೆಯುವ ಮಕ್ಕಳ ತಂದೆ/ತಾಯಿಯರ, ಪೋಷಕರ, ಶಾಲೆ ಶಿಕ್ಷಕರ, ಶಾಲೆ ಮುಖ್ಯೋಪಾದ್ಯಯರ ಮೊಬೈಲ್ ಸಂಖ್ಯೆಯನ್ನು ಬಳಸಿ ಲಸಿಕೆಯನ್ನು ಉಚಿತವಾಗಿ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ನಂಬರ್ ಬಳಸಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಾಣಿ ಮಾಡಲಾಗುತ್ತಿರುವುದಾಗಿ ಶ್ರೀ ವಿನೋದ್ ಜಿ ಆರೋಗ್ಯ ಪರಿವೀಕ್ಷಕರು ಮತ್ತು ಡಾ|| ಯೋಗೇಶ್ ರವರು ಸಭೆಗೆ ತಿಳಿಸಿದ್ದರು.
3. ಕೋವಿಡ್-19 ಓಮಿಕ್ರಾನ್ ದೈನಂದಿನ ಪ್ರಕರಣಗಳು ಹೆಚ್ಚಾಗುತ್ತಿದ್ದು. ಇದನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುವ ಬಗ್ಗೆ ಸದಸ್ಯರಾದ ಶ್ರೀ ಉಮೇಶ್, ಶ್ರೀ ಕೇಶವ ರೆಡ್ಡಿ ಮತ್ತು ಸಭೆಯಲ್ಲಿ ಹಾಜರಿದ್ದ, ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದ್ದು. ಈ ಬಗ್ಗೆ ಡಾ|| ಯೋಗೇಶ್ ವೈದ್ಯರು ಮಾತನಾಡುತ್ತಾ, ಕೋವಿಡ್ -19 ಪರೀಕ್ಷೆಯನ್ನು ಒಂದು ದಿನದಲ್ಲಿ 500 ಜನರಿಗೆ ಪರೀಕ್ಷೆ ಮಾಡಲಾಗುತ್ತಿದ್ದು, ಓಮಿಕ್ರಾನ್ ಸೋಂಕು ಹರಡದಂತೆ ನಿಯಂತ್ರಣದಲ್ಲಿದ್ದು. ಜಾಗೃತಿ ವಹಿಸಲಾಗಿದೆ ಈಗಾಗಲೇ ಸರ್ಕಾರವು ಮಾರ್ಗ ಸೂಚಿಗಳನ್ನು ಹೊರಡಿಸಿದ್ದು. ಅದರಂತೆ ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆ ನಿರ್ವಹಣೆ ವ್ಯವಸ್ಥೆಯನ್ನು ನಿರ್ವಹಿಸಲು ಅನವುವಾಗುವಂತೆ ಬೊಮ್ಮನಹಳ್ಳಿ ವಲಯದಲ್ಲಿ 3 ಕಡೆ ಹಾಸಿಗೆ ವ್ಯವಸ್ಥೆ ಕಲ್ಪಿಸಲು ಯೋಜಿಸಿದ್ದು. 150 ಹಾಸಿಗೆ Oxigen ವ್ಯವಸ್ಥೆ ಮಾಡಲು ತಯಾರಿ ಮಾಡಿಕೊಂಡಿರುವುದಾಗಿ ಶ್ರೀ ವಿನೋದ್ ಜಿ ಆರೋಗ್ಯ ಪರಿವೀಕ್ಷಕರು ಮತ್ತು ಡಾ|| ಯೋಗೇಶ್ ರವರ ಸಭೆಗೆ ತಿಳಿಸಿದ್ದರು.
4. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಕೇರ್ ಸೆಂಟರ್‌ವನ್ನು ಸಾರ್ವಜನಿಕರ ಕೋವಿಡ್ 19ರ ಬಗ್ಗೆ ಅರಿವು ಮೂಡಿಸಿ ಸೋಂಕು ನಿಯಂತ್ರಣದಲ್ಲಿರಿಸಲು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ ಎಂದು ಶ್ರೀ ವಿನೋದ್ ಹಿ.ಅ.ಪ ಮತ್ತು ಡಾ|| ಯೋಗೇಶ್ ರವರು ಸಭೆಯಲ್ಲಿ ತಿಳಿಸಿದ್ದರು.
5. ವಾರ್ಡ್ ವ್ಯಾಪ್ತಿಯ ಆಯಿಷಾ ಮಸೀದಿ ಹತ್ತಿರ ಲಸಿಕೆ ನೀಡಲು ಕ್ಯಾಂಪ್ ಮಾಡಿ ಒಂದನೇ ಡೋಸ್ ಪಡೆದುಕೊಂಡವರಿಗೆ 2ನೇ ಡೋಸ್ ಲಸಿಕೆ ಹಾಕುವಂತೆ ಶ್ರೀ ಮೌಲಾ ಸಾಬ್ ಮತ್ತು ಶ್ರೀ ಉಮೇಶ್ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದು. ಈ ಬಗ್ಗೆ ಡಾ|| ಯೋಗೇಶ್ ಲಸಿಕೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು. ಶ್ರೀ ಮೌಲಾ ಸಾಬ್ ರವರು ಮಾತನಾಡಿ ಕ್ಯಾಂಪ್ ಏರ್ಪಡಿಸಿ ಲಸಿಕೆ ಪಡೆದವರಿಂದ ಗುರುತಿನ ಚೀಟಿ ಮತ್ತು ಮೊಬೈಲ್ ಸಂಖ್ಯೆಯನ್ನು ಪಡೆದು ಸಂಜೆ ವೇಳೆಯಲ್ಲಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಲಾಗುತ್ತಿದ್ದು. ಸ್ಥಳದಲೇ ಮಾಡುವಂತೆ ಸಭೆಯ ಗಮಕ್ಕೆ ತಂದಿದ್ದು. ಇದಕ್ಕೆ ಶ್ರೀ ವಿನೋದ ಹಿ.ಅ.ಪ ಮತ್ತು ಡಾ|| ಯೋಗೇಶ್ ರವರು ಸ್ಟ್ಯಾಪ್ ನರ್ಸ್ / ಸಿಬ್ಬಂದಿ ತಂಡದವರಿಗೆ ಸೂಚನೆ ನೀಡಲಾಗುವುದೆಂದು ತಿಳಿಸಿದರು.

(3......)

Scanned with

- **<u>ಘನತ್ಯಾಜ್ಯ</u>**

1. ವಾರ್ಡ್ ವ್ಯಾಪ್ತಿಯ ಕೆಸಿಡಿಸಿಗೆ ಬರುವ Bio Waste ನ್ನು (ಜೈವಿಕ ತ್ಯಾಜ್ಯ) ವಾಹನದಲ್ಲಿ Medicines waste ಮತ್ತು ಇತ್ಯಾದಿ ತ್ಯಾಜ್ಯವು ಬರುತ್ತಿದ್ದು. ಈ ಬಗ್ಗೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುವ ಸಾಧ್ಯತೆಗಳಿರುವುದರಿಂದ ಈ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಶ್ರೀ ಕೇಶವ ರೆಡ್ಡಿ ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ವಿನೋದ್ ಹಿ.ಅ.ಪ ರವರು ಮಾರ್ಷಲ್‌ಗಳಿಗೆ ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.

- **<u>ಪಶುಸಂಗೋಪನೆ</u>**

1. ವಾರ್ಡ್ ವ್ಯಾಪ್ತಿಯಲ್ಲಿ ಕೋಳಿ ಮಾಂಸದ ತ್ಯಾಜ್ಯವನ್ನು ರಸ್ತೆಯಲ್ಲಿ ಸುರಿಯುತ್ತಿದ್ದು. ಇದನ್ನು ಕಸದ ಆಟೋಗಳಲ್ಲಿ ವಿಲೇವಾರಿ ಮಾಡಿಸುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಗುತ್ತಿಗೆದಾರರನ್ನು ನೇಮಿಸಿದ್ದು. ಸದರಿ ಗುತ್ತಿಗೆದಾರರಿಗೆ ವಿಲೇವಾರಿ ಮಾಡುವಂತೆ ಸೂಚಿಸಲಾಗುವುದೆಂದು ಸಭೆಯಲ್ಲಿ ಶ್ರೀ ಎಸ್. ಸುಧೀರ್ ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ ರವರು ತಿಳಿಸಿದ್ದರು.
2. ವಾರ್ಡ್ ವ್ಯಾಪ್ತಿಯ ಕೆ.ಸಿ.ಡಿ.ಸಿ ಸುತ್ತಮುತ್ತ ಸುಮಾರು ನಾಯಿಗಳು ಇದ್ದು. ಹಿರಿಯ ನಾಗರೀಕರಿಗೆ. ಮಕ್ಕಳಿಗೆ. ಸ್ಥಳೀಯ ನಿವಾಸಿಗಳಿಗೆ ಓಡಾಡಲು ಕಷ್ಟಕರವಾಗುತ್ತಿರುವ ಬಗ್ಗೆ ಸದಸ್ಯರಾದ ಶ್ರೀ ಕೇಶವ್ ರೆಡ್ಡಿ ರವರು ಸಭೆಯಲ್ಲಿ ಪ್ರಸ್ತಾಪಿಸಿದ್ದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಸ್. ಸುಧೀರ್ ಹಿರಿಯ ಪಶು ವೈದ್ಯಕೀಯ ಇನ್ಸ್‌ಪೆಕ್ಟರ್. ರವರ ಕಚ್ಚುವ ನಾಯಿಯ ಛಾಯಾಚಿತ್ರ ತೆಗೆದು ಪ್ರತ್ಯೇಕವಾಗಿ ದೂರು ನೀಡಿದರೆ. ಸ್ಥಳಕ್ಕೆ ಭೇಟಿ ನೀಡಿ ನಾಯಿಗಳನ್ನು ಹಿಡಿದ್ದುಕೊಂಡು ಶಸ್ತ್ರ ಚಿಕಿತ್ಸೆ ಮಾಡಿ ಅನಂತರ ಅದೇ ಸ್ಥಳದಲ್ಲಿ ಬಿಡಲಾಗುವುದೆಂದು ಹಾಗೂ ಶಸ್ತ್ರ ಚಿಕತ್ಸೆ ಆದ ನಾಯಿಗಳನ್ನು ಹಿಡಿದುಕೊಂಡರೆ ಅದು ಮಾನ್ಯ ಉಚ್ಚ ನ್ಯಾಯಲಯದ ಮಾರ್ಗಸೂಚಿಗಳನ್ವಯ ನ್ಯಾಯಾಂಗ ನಿಂದನೆ ಆಗಿ ನಮ್ಮ ವಿರುದ್ಧ ಎಫ್.ಐ.ಆರ್ ದಾಖಲಾಗುತ್ತದೆ ಎಂದು ಸಭೆಗೆ ತಿಳಿಸಿದ್ದರು.

- **<u>ಬೀದಿ ದೀಪ</u>**

1. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿದಂತೆ ಬೀದಿ ದೀಪಗಳ ನಿರ್ವಹಣೆ. ಟೈಮರ್ಸ್ ಅನ್ನು ಅಳವಡಿಸುವಂತೆ ತಿಳಿಸಿದರೂ ಸಹ ಇದುವರೆಗೂ ಅಳವಡಿಸಿಲ್ಲ ಎಂದು ಸದಸ್ಯರಾದ ಶ್ರೀ ಉಮೇಶ್ ಹಾಗೂ ಎಲ್ಲಾ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದ್ದರು. ಸಭೆಗೆ ಗೈರು ಹಾಜರಾಗಿರುವ ಶ್ರೀ ರಮೇಶ್ ಸ.ಅ. ರವರ ಪರವಾಗಿ ಸಭೆಗೆ ಹಾಜರಾಗಿದ್ದ ಶ್ರೀ ಸುನೀಲ್ ರವರು ಜನವರಿ ಅಂತ್ಯದೊಳಗಾಗಿ ಟೆಂಡರ್ ಅಂತಿಮವಾಗಲಿದ್ದು ಎಲ್.ಇ.ಡಿ. ಬಲ್ಬ್‌ಗಳನ್ನು ಹಾಗೂ ಟೈಮರ್‌ಗಳನ್ನು ಶೀಘ್ರವಾಗಿ ಅಳವಡಿಸಲಾಗುವುದೆಂದು ಸಭೆಗೆ ತಿಳಿಸಿದ್ದರು.

- ವಾರ್ಡ್ ವ್ಯಾಪ್ತಿಯ ಪೋಲಿಸ್ ಬೀಟ್ ಆಗುವ ಜಾಗದಲ್ಲಿ. ಪ್ರಾಥಮಿಕ ಆರೋಗ್ಯ ಕೇಂದ್ರ. ಸ್ಮಶಾನ. ಕೆರೆ ಸುತ್ತಮುತ್ತ ಸರ್ಕಾರಿ ಶಾಲೆಯ ಮತ್ತು ಇತ್ಯಾದಿ ಅವಶ್ಯಕವಿರುವ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸದಸ್ಯರು ಮತ್ತು ಸಾರ್ವಜನಿಕರು ಸಭೆಯ ಗಮನಕ್ಕೆ ತಂದಿದ್ದು. ಸಭೆಗೆ ಗೈರು ಹಾಜರಾಗಿರುವ ಶ್ರೀ ರಮೇಶ್ ಸ.ಅ. ರವರ ಪರವಾಗಿ ಸಭೆಗೆ ಹಾಜರಾಗಿದ್ದ ಶ್ರೀ ಸುನೀಲ್ ರವರು ಈಗಾಗಲೇ ಪೋಲಿಸ್ ಬೀಟ್ ಮತ್ತು ಇತರೆ ಜಾಗಗಳಲ್ಲಿ ಬೀದಿದೀಪಗಳನ್ನು ಅಳವಡಿಸಿದ್ದು. ಅವಶ್ಯಕವಿರುವ ಸ್ಥಳಗಳನ್ನು ಗುರುತಿಸಿ ಪಟ್ಟಿ ನೀಡಿದ್ದಲ್ಲಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದ್ದರು.

- ಸಂಚಾರಿ ಪೋಲಿಸ್ (ಟ್ರಾಫಿಕ್)

1. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಬದೀಗಳಲ್ಲಿ. ರಸ್ತೆಯ ತಿರುವಿನಲ್ಲಿ ಮತ್ತು ಇತರೆ ಸ್ಥಳಗಲ್ಲಿ. ದ್ವಿ-ಚಕ್ರ ಮತ್ತು ನಾಲ್ಕು ಚಕ್ರ ವಾಹನ ಸುಮಾರು ವರ್ಷಗಳಿಂದ ಒಂದೇ ಕಡೆ ನಿಲ್ಲಿಸಿದ್ದು. ದುಶ್ಕಟ ಮಾಡುವವರಿಗೆ ಇದು ಒಂದು ಸ್ಥಳವಾಗಿ ಮಾರ್ಪಟಿದ್ದು. ರಸ್ತೆಯ ತಿರುವಿನಲ್ಲಿ ಅಪಘಾತ ಸಂಭವಿಸುತ್ತಿದ್ದು. ಸದರಿ ವಾಹನಗಳ ಮಾಲೀಕರಿಗೆ ದಂಢ ವಿಧಿಸಿ. ನೋಟೀಸ್ ಜಾರಿ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ರವರು ಸಭೆಯ ಗಮನಕ್ಕೆ ತಂದರು. ಇದಕ್ಕೆ ಸಂಬಂಧಿಸಿದಂತೆ. ಶ್ರೀ ಶ್ರೀ ಶಿವಶಂಕರ ಪಿ.ಎಸ್.ಐ. ಟ್ರಾಫಿಕ್ ರವರು Unclaimed vehicles ನ್ನು ಪೋಲಿಸ್ ಇಲಾಖೆ ವತಿಯಿಂದ ವಶಪಡಿಸಿಕೊಳ್ಳಲಾಗುವುದೆಂದು ಹಾಗೂ ರಸ್ತೆ ಬದಿಗಳಲ್ಲಿ. ರಸ್ತೆ ತಿರುವಿನಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ನಿಲ್ಲಿಸಿರುವ ವಾಹನಗಳನ್ನು ಪೋಲಿಸ್ ಇಲಾಖೆಯವರು ವಶಪಡಿಸಿಕೊಳ್ಳುವುದಕ್ಕೆ ತಾವು ಸಹಕಾರ ನೀಡುವುದಾಗಿ ಸಭೆಗೆ ತಿಳಿಸಿದ್ದರು.

Scanned with

- <u>ಬಿ.ಡಬ್ಲ್ಯೂ.ಎಸ್.ಎಸ್.ಬಿ.</u>

1. ಹಿಂದಿನ ಹಲವಾರು ಸಭೆಗಳಲ್ಲಿ ಪ್ರಸ್ತಾಪಿಸಿದ ವಿಷಯಗಳ ಬಗ್ಗೆ ಚರ್ಚಿಸಿದಂತೆ ಇಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕುಡಿಯುವ ನೀರಿನ & ಒಳಚರಂಡಿ ಸಂಪರ್ಕದ ಸೌಲಭ್ಯವನ್ನು ಪಡೆದುಕೊಂಡಿರುವವರಿಗೆ ಇದುವರೆಗೂ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಎಲ್ಲಾ ಸದಸದ್ಯರು ಸಭೆಯಲ್ಲಿ ಆಕ್ಷೇಪಿಸಿರುತ್ತಾರೆ ಹಾಗೂ ಮಾಲೀಕರು ಮನೆ ಬಾಡಿಗೆದಾರರಿಂದ ಕುಡಿಯುವ ನೀರಿನ ಬಿಲ್ ಹೆಚ್ಚಾಗಿ ತೆಗೆದುಕೊಳ್ಳುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂಎಸ್‌ಎಸ್‌ಬಿ ಸಹಾಯಕ ಅಭಿಯಂತರರು ಈಗಾಗಲೇ ಬಿಎಂಟಿಎಫ್ ರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಇಲಾಖೆಯಿಂದ ಸರ್ವೆ ನಡೆಸಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು, ಮೀಟರ್ ಅಳವಡಿಸಿಕೊಳ್ಳದೆ ಇರುವವರಿಂದ ದಂಡವನ್ನು ವಸೂಲಾತಿ ಮಾಡಲಾಗಿರುತ್ತದೆ ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.
2. ಮ್ಯಾನ್ ಹೋಲ್‌ಗಳಲ್ಲಿ ಹೂಳು ತುಂಬಿರುವ ಬಗ್ಗೆ ಹಿಂದಿನ ಹಲವಾರು ಸಭೆಯಲ್ಲಿ ಸೂಚಿಸಿದರು ಸಮರ್ಪಕವಾಗಿ ಹೂಳನ್ನು ತೆಗೆದೆ ಇರುವುದರಿಂದ ಕೊಳಚೆ ನೀರು ರಸ್ತೆ ಮೇಲ್ಭಾಗದಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವಾಗಿ ಸಾಂಕ್ರಾಮಿಕ ರೋಗ ಹರಡುವ ಸಂಭವವಿದ್ದು, ಮಕ್ಕಳಿಗೆ ಮತ್ತು ವಯೋ ವೃದ್ಧರ ಮೇಲೆ ಪರಿಣಾಮ ಬೀರಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ವಿಷಾದನಿಯ ಎಂದು ಸದಸ್ಯರು ಸಭೆಯಲ್ಲಿ ಆಕ್ಷೇಪಿಸಿರುತ್ತಾರೆ.
3. ಕಾಮಗಾರಿಗಳ ಸ್ಥಳದಲ್ಲಿ ಗುಂಡಿಗಳನ್ನು ಅಗೆದು ಮುಚ್ಚದೆ ಹಾಗೆಯೇ ಮಣ್ಣು, ಜಲ್ಲಿ ಇತರೆ ವ್ಯರ್ಥ ಸಾಮಾಗ್ರಿಗಳನ್ನು ಸ್ಥಳದಲೇ ಬಿಟ್ಟಿದ್ದು, ನಾಗರೀಕರ ಸಂಚಾರಕ್ಕೆ ಅಡಚಣೆಯಾಗುತ್ತಿರುವುದರಿಂದ ಅಪಘಾತ ಸಂಭವಿಸುವ ಸಾಧ್ಯತೆಗಳಿರುತ್ತದೆ. ಆದ್ದರಿಂದ ಕೊಳಚೆ ನೀರು ಸರಿಯಾಗಿ ಪೈಪ್ ಲೈನ್ ಮೂಲಕ ಹರಿಯದೆ ಅಲೇ ಬ್ಲಾಕ್ ಆಗಿ ಕೊಳಚೆ ನೀರು ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿದ್ದು, ಈ ನೀರನ್ನು ಹಂದಿಗಳು, ನಾಯಿಗಳು ಸೇರಿ ಸಾರ್ವಜನಿಕರ ಮೇಲೆ ದುಷ್ಪರಿಣಾಮ ಹಾಗೂ ಕೊಳಚೆ ನೀರು ಸರಿಯಾಗಿ ಹರಿಯದೆ ಇರುವುದರಿಂದ ಮಂಗಮ್ಮನಪಾಳ್ಯ ಮತ್ತು ಸೋಮಸುಂದರಪಾಳ್ಯ ಕೆರೆಗೆ ಹರಿದು ಕೆರೆಯಲ್ಲಿರುವ ಜಲಚರಗಳು ನೀರನ್ನು ಕುಡಿದು ಸಾವು ಸಂಭವಿಸಿರುವುದು ವರದಿಯಾಗಿರುತ್ತದೆ ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರ ಗಮನಕ್ಕೆ ತರುತ್ತಾ, ಕ್ರಮ ವಹಿಸಲು ಸೂಚಿಸಲಾಗಿದೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalabalu
ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with